2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **102/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಈರಪ್ಪ | ಪಿಡಬ್ಲ್ಯೂ - 5 |
| ತಂದೆಯ ಹೆಸರು | - | ಬಯ್ಯಾಬೋವಿ | ಸಿಡಬ್ಲ್ಯೂ - 6 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ದೊಡ್ಡ ಬುಕ್ಕಸಾಗರ, ಕಡೂರು ತಾಃ | |

ದಿನಾಂಕಃ 06-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇರುತ್ತದೆ. ಚಾಸಾ.7 ಚಿನ್ನಪ್ಪ ಇವರ ಪರಿಚಯ ಸಹ ಇರುತ್ತದೆ. ಸದರಿ ಚಿನ್ನಪ್ಪ ಇವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರಲ್ಲಿ ಒಬ್ಬ ಮೃತಪಟ್ಟಿರುತ್ತಾರೆ.

2. ಈಗ 3 ವರ್ಷಗಳ ಹಿಂದೆ ನಾನು ಜೋಗಿ ಕಣಿವೆಯ ಹತ್ತಿರ ಸ್ಥಳಕ್ಕೆ ಹೋಗಿದ್ದೆನು. ನಾನು ಮತ್ತು ಇತರೆ 4-5 ಜನ ದ್ವಿಚಕ್ರ ವಾಹನಗಳಲ್ಲಿ ಸ್ಥಳಕ್ಕೆ ಹೋಗಿದ್ದೆವು. ಮೃತ ಮಂಜುನಾಥನ ಕೊಲೆಯಾಗಿರು ವಿಷಯ ತಿಳಿದು ಸದರಿ ಸ್ಥಳಕ್ಕೆ ಹೋಗಿದ್ದೆವು. ನಾವು ಹೋದಾಗ ಸಮಯ ಬೆಳಿಗ್ಗೆ 8.30 ರಿಂದ 9.00 ಗಂಟೆಯಾಗಿರಬಹುದು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ 1 ನೇ ಆರೋಪಿ ಪ್ರದೀಪ, ಪ್ರಾಸಾ.4 ನಾಗರಾಜ, ಪ್ರಾಸಾ.3 ಲೋಕೇಶ ಮತ್ತು ಪೊಲೀಸರು ಸಹ ಸ್ಥಳದಲ್ಲಿ ಇದ್ದರು. ನಾವು ಸ್ಥಳಕ್ಕೆ ಹೋಗಿ

ನೋಡಿದಾಗ ಒಂದು ಸುಟ್ಟು ಹೋದ ಶವವನ್ನು ನೋಡಿದ್ದು ಅದು ಮೃತ ಮಂಜುನಾಥನ ಶವವಾಗಿರುತ್ತದೆ. ನಂತರ ಪೊಲೀಸರು ನಮಗೆ ಶವದ ಮೇಲೆ ಇರುವ ವಸ್ತುಗಳನ್ನು ತೆಗೆಯುವ ನಿಮಿತ್ತ ಮಹಜರ್ ಮಾಡಬೇಕಾಗಿದ್ದು ನಮಗೆ ಸಹಿ ಮಾಡಲು ಕೇಳಿಕೊಂಡಿರುತ್ತಾರೆ, ಅದರಂತೆ  ನಾವು ಸಹಿ ಮಾಡಲು ಒಪ್ಪಿಕೊಂಡಿರುತ್ತೇವೆ. ಸಾಕ್ಷಿಯು ನಿ.ಪಿ.8 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.8(ಸಿ) ಎಂದು ಗುರುತಿಸಲಾಯಿತು. ನಾವು ಶವವನ್ನು ನೋಡಿದಾಗ ಶವದ ಬಲಗೈಯಲ್ಲಿ ಒಂದು ಕಡಗವಿತ್ತು, ಶವದ ಕುತ್ತಿಗೆಯಲ್ಲಿ ಕ್ಲಚ್ ವೈರ್ ಇತ್ತು, ಶವದ ಹತ್ತಿರ ಒಂದು ದಾರ ಬಿದ್ದಿತ್ತು, ಒಂದು ಅರ್ದಂಬರ್ದ ಸುಟ್ಟ ಪ್ಲಾಸ್ಟಿಕ್ ಕ್ಯಾನ್ ಇತ್ತು,  ಅರ್ದಂಬರ್ದ ಸುಟ್ಟ ಚಡ್ಡಿ ಇತ್ತು.

3. ನನಗೆ ಮೃತ ಮಂಜುನಾಥನು 1 ನೇ ಆರೋಪಿಯ ಹೆಂಡತಿಯ ಜೊತೆ ಅಕ್ರಮ ಸಂಬಂಧವಿದುದ್ದರಿಂದ  1 ನೇ ಆರೋಪಿಯು ಮೃತ ಮಂಜುನಾಥನನ್ನು ಕೊಲೆ ಮಾಡಿರುವ ವಿಷಯ ಗೊತ್ತಾಯಿತು. ಶವದ ಮೇಲೆ ಇದ್ದ ವಸ್ತುಗಳನ್ನು ಪೊಲೀಸರು ಒಂದು ಬಿಳಿ ಬಟ್ಟೆಯಲ್ಲಿ ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಚಾಸಾ.9 ಕಾಂತರಾಜ್ ಮತ್ತು ಚಾಸಾ.10 ಜಯಣ್ಣ ಸಹ ಇದ್ದರು. ಪೊಲೀಸರು ಈ ವಿಚಾರವಾಗಿ ಚಾಸಾ.9 ಮತ್ತು ಚಾಸಾ.10 ಇವರನ್ನು ವಿಚಾರಿಸಿರುತ್ತಾರೆ. ಇದರ ಕುರಿತಂತೆ ಪೊಲೀಸರು ಒಂದು ಮಹಜರ್ ಮಾಡಿಕೊಂಡಿದ್ದು

ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಸದರಿ ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಶವ ತನಿಖಾ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.9 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ್ನು ಪೊಲೀಸರು ಮಧ್ಯಾಹ್ನ 12.30 ಗಂಟೆ ವರೆಗೂ ಮಾಡಿರುತ್ತಾರೆ.

<u>ಪಾಟೀ ಸವಾಲು ಶ್ರೀ ಸಿ.ಎನ್.ವಿ. ವಕೀಲರಿಂದ – ಆರೋಪಿತರ ಪರವಾಗಿ</u>

4. (ಈ ಹಂತದಲ್ಲಿ ಆರೋಪಿ ಪರ ವಕೀಲರಾದ ಶ್ರೀ ಸಿ.ಎನ್.ವಿ. ರವರು ತಾನು ಈ ದಿನವೇ ಪ್ರಕರಣವನ್ನು ಆರೋಪಿಗಳ ಪರ ವಹಿಸಿಕೊಂಡಿದ್ದರಿಂದ ಪಾಟೀ ಸವಾಲು ಮಾಡಲು ಸಮಯವಕಾಶ ಕೇಳಿದ್ದು, ನೀಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.

ದಿನಾಂಕಃ 30-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಸಿ.ಎನ್.ವಿ. ವಕೀಲರಿಂದ – ಆರೋಪಿತರ ಪರವಾಗಿ

5. ನನಗೆ ಮೃತನ ತಂದೆ ಚಿನ್ನಪ್ಪ ಮತ್ತು ಅವರ ಮಗ ಕುಮಾರ ಪರಿಚಯ ಇರುತ್ತದೆ. ನಾನು ನಿ.ಪಿ.9 ಕ್ಕೆ ಸಹಿ ಮಾಡಿದ್ದು ಆ ಕಾಲಕ್ಕೆ ನಾನು ಕೂಲಿ ಕೆಲಸ ಮಾಡುತ್ತಿದ್ದೆನು. ಸದರಿ ಚಿನ್ನಪ್ಪ ಇವರಿಗೆ ತೆಂಗು ಮತ್ತು ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಾನು ಅವರ ತೋಟಕ್ಕೆ ಕೂಲಿ ಕೆಲಸಕ್ಕೆಂದು ಹೋಗುತ್ತಿರಲಿಲ್ಲ. ಆರೋಪಿ ಪ್ರದೀಪನ ಮನೆ ನಮ್ಮ ಮನೆಯಿಂದ ದೂರ ಇರುತ್ತದೆ. ಮೃತ ಮಂಜುನಾಥನು ಕಾಣೆಯಾದ ದಿನದಿಂದ ಒಂದು ವಾರಕ್ಕೆ ಆತನು ಕಾಣೆಯಾದ ಬಗ್ಗೆ ನನಗೆ ವಿಚಾರ ಗೊತ್ತಾಗಿರುತ್ತದೆ. ಆ ಸಮಯದಲ್ಲಿ ನಾನು ಕೂಲಿ ಕೆಲಸಕ್ಕೆಂದು ಚಿಕ್ಕಮಗಳೂರಿಗೆ ಬರುತ್ತಿದ್ದೆನು. ಆ ರೀತಿ ನಾವು ಕೆಲಸಕ್ಕೆ ತಂಡವಾಗಿ 4-5 ಜನ ಬರುತ್ತಿದ್ದೆವು. ಆ ರೀತಿ ಕೂಲಿ ಕೆಲಸಕ್ಕೆಂದು ಬಂದಾಗ ಚಿಕ್ಕಮಗಳೂರಿನಲ್ಲಿ 2-3 ದಿವಸ ಉಳಿದುಕೊಳ್ಳುತ್ತಿದ್ದೆವು. ನಾನು ಒಂದು ದಾಖಲೆಗೆ ಸಹಿ ಮಾಡಿದ್ದು ಸದರಿ ದಾಖಲೆಯು ಶವದ ಮೇಲೆ ಇದ್ದ ವಸ್ತುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಮಾಡಿದ್ದು ಇರುತ್ತದೆ. ಸದರಿ ವಸ್ತುಗಳನ್ನು ಪೊಲೀಸರು ನಮ್ಮ ಸಮಕ್ಷಮ ಒಂದು ಬಿಳಿ ಬಟ್ಟೆಯಲ್ಲಿ ತೆಗೆದುಕೊಂಡು ಅವುಗಳಿಗೆ ಸೀಲು ಮಾಡಿಕೊಂಡಿರುತ್ತಾರೆ. ಸದರಿ ವಸ್ತುಗಳನ್ನು

ವಶಪಡಿಸಿಕೊಂಡಿದ್ದಕ್ಕೆ ಸಾಕ್ಷಿಯಾಗಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ನಾನು ನಿ.ಪಿ.9 ಮಹಜರ್ ಸಹಿ ಮಾಡುವ ದಿನದಂದು ಬೆಳಿಗ್ಗೆ 8.30 ಗಂಟೆ ಸಮಾರಿಗೆ ನಾನು ಚಿಕ್ಕಮಗಳೂರಿಗೆ ಕೂಲಿ ಕೆಲಸಕ್ಕೆಂದು ಬಿ.ಹೆಚ್. ರಸ್ತೆಯಲ್ಲಿ ಬರುತ್ತಿದ್ದಾಗ ರಸ್ತೆ ಬದಿಯಲ್ಲಿ ನಿಂತುಕೊಂಡಿದ್ದ ಜನರು ಮೃತ ಮಂಜುನಾಥನ ಶವ ಸಿಕ್ಕಿರುವ ವಿಷಯವನ್ನು ಮಾತನಾಡಿಕೊಳ್ಳುತ್ತಿದ್ದರು. ಸದರಿ ಬಿ.ಹೆಚ್. ರಸ್ತೆಯಲ್ಲಿ ಆ ಸಮಯದಲ್ಲಿ ನಮ್ಮ ಊರಿನ ಗ್ರಾಮಸ್ಥರು ಇದ್ದರು, ಆದರೆ ಮೃತನ ಕುಟುಂಬಸ್ಥರು ಇರಲಿಲ್ಲ. ನಾನು ಆ ದಿನ ಬಿ.ಹೆಚ್. ರಸ್ತೆಯ ಮುಖಾಂತರ ಕೂಲಿಗೆ ಎಂದು ಹೋಗುತ್ತಿದ್ದಾಗ ಮೃತ ಮಂಜುನಾಥನ ಶವ ಸಿಕ್ಕ ಬಗ್ಗೆ ಜನರು ಮಾತನಾಡಿದ್ದು, ಆ ಸದರಿ ಸ್ಥಳದಿಂದ ಮೃತನ ಶವ ಇದ್ದ ಸ್ಥಳವು ಸುಮಾರು 350 ಅಡಿ ದೂರ ಇದ್ದು, ಅಲ್ಲಿಗೆ ನಾನು ಮತ್ತು ಇನ್ನು ಇಬ್ಬರು ಬೈಕ್ ನಲ್ಲಿ ಹೋಗಿರುತ್ತೇವೆ. ನಾವು ಶವ ಇದ್ದ ಸ್ಥಳಕ್ಕೆ ಭೇಟಿ ಕೊಟ್ಟಾಗ ಬೆಳಿಗ್ಗೆ 8.45 ರಿಂದ 9.00 ಗಂಟೆಯಾಗಿತ್ತು.

6. ನಾನು ಸದರಿ ಸ್ಥಳಕ್ಕೆ ಹೋದಾಗ ಅಲ್ಲಿ ನಮ್ಮ ಊರಿನ ಗ್ರಾಮಸ್ಥರು ಇದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಗ್ರಾಮಸ್ಥರು ಇರಲಿಲ್ಲ, ಆದರೆ ನಮ್ಮ ಗ್ರಾಮದವರಾದ ಲೋಕೇಶ ಮತ್ತು ನಾಗರಾಜ್ ಸ್ಥಳದಲ್ಲಿ ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅದೇ ರೀತಿ ಶವ ಇದ್ದ ಸ್ಥಳದಲ್ಲಿ ಮೃತನ ತಂದೆ ಚಿನ್ನಪ್ಪ ಮತ್ತು ಅಣ್ಣ ಕುಮಾರ್ ಸಹ ಇದ್ದರು. ಸದರಿ ಸ್ಥಳದಲ್ಲಿ ಅರಣ್ಯ ಇಲಾಖೆಯ

ಸಿಬ್ಬಂಧಿಗಳು ಇಬ್ಬರು ಮೂವರು ಇದ್ದರು. ಸ್ಥಳದಲ್ಲಿ ಇದ್ದ ಶವವು ಸಂಪೂರ್ಣ ಕೊಳೆತ ಸ್ಥಿತಿಯಲ್ಲಿ ಇತ್ತು ಎಂದರೆ ಸಾಕ್ಷಿಯು ಶವವು ಅರ್ಧಂಬರ್ಧ ಸುಟ್ಟು ಹೋಗಿತ್ತು ಎಂದು ಹೇಳುತ್ತಾರೆ. ನಾನು ಸದರಿ ಸ್ಥಳದಲ್ಲಿ ಶವವನ್ನು ನೋಡಿದಾಗ ಅದನ್ನು ಗುರುತಿಸಲು ಆಗಲಿಲ್ಲ.

7. ನಾನು ನಿ.ಪಿ.9 ಮಹಜರ್ ಗೆ ಶವ ಇದ್ದ ಸ್ಥಳದಲ್ಲಿ ಮಾಡಿರುವುದಿಲ್ಲ, ಪೊಲೀಸ್ ಠಾಣೆಯಲ್ಲಿಯೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.9 ಮಹಜರ್ ಕಾಲಕ್ಕೆ ಶವದ ಮೇಲೆ ಇದ್ದ ವಸ್ತುಗಳನ್ನು ಪೊಲೀಸರು ನಮ್ಮ ಸಮಕ್ಷಮ ತೆಗೆದುಕೊಂಡಿದ್ದು ಅದಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈಗ ನಾನು ನ್ಯಾಯಾಲಯದಲ್ಲಿ ನೋಡುತ್ತಿರುವ ವಸ್ತುಗಳಿಗೂ ಮತ್ತು ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

8. ನನಗೆ ಮೃತ ಮಂಜುನಾಥನು 1 ನೇ ಆರೋಪಿಯ ಹೆಂಡತಿಯ ಜೊತೆ ಅಕ್ರಮ ಸಂಬಂಧವಿದುದ್ದರಿಂದ 1 ನೇ ಆರೋಪಿಯು ಮೃತ ಮಂಜುನಾಥನನ್ನು ಕೊಲೆ ಮಾಡಿರುವ ವಿಷಯ ಗೊತ್ತಾಯಿತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.